ಸಾತ್ತ್ವಿಕ ಕಲೆಯ ಪ್ರಸ್ತುತೀಕರಣ : ರಂಗೋಲಿ - ಖಂಡ ೨

## ದೇವತೆಗಳ ತತ್ತ್ವ ಮತ್ತು
## ಆನಂದ ಇತ್ಯಾದಿ ಸ್ಪಂದನಗಳಿಂದ ಕೂಡಿದ

# ಸಾತ್ತ್ವಿಕ ರಂಗೋಲಿಗಳು

(Sattvik Rangolis) ಕನ್ನಡ (Kannada)


**ಸಂಕಲನಕಾರರು**

ಹಿಂದೂ ರಾಷ್ಟ್ರದ ಸ್ಥಾಪನೆಯ ಉದ್ಘೋಷಕರು

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

**ಕು. ಸಂಧ್ಯಾ ಪುಂಡಲೀಕ ಮಾಳಿ**



**ಸನಾತನ ಸಂಸ್ಥೆ**

ಪ್ರಸ್ತುತ ಪುನರ್ಮುದ್ರಣದ ೪,೦೦೦ ಪ್ರತಿಗಳು ಮತ್ತು
ಇಂದಿನವರೆಗೆ ೬೮,೧೦೦ ಪ್ರತಿಗಳು ಪ್ರಕಾಶಿತಗೊಂಡಿವೆ !

**ಪ್ರಕಾಶಕರು :** ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101. ಕರ್ನಾಟಕ. ದೂ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ಇ–ಅಂಚೆ : granth@sanatan.org

**First Edition :** Ganesh Chaturthi, Kaliyug Varsh 5111
(23th August 2009)

**12th Reprint :** Deepavali, Kaliyug Varsh 5125
(14th November 2023)

Translated from the Original Marathi Booklet 'Sattvik Rangolya'
ಪ್ರಸ್ತುತ ಗ್ರಂಥ ಹಿಂದಿ, ಆಂಗ್ಲ, ಗುಜರಾತಿ, ತಮಿಳು, ತೆಲುಗು ಭಾಷೆಗಳಲ್ಲೂ ಲಭ್ಯ.

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ಅನುವಾದಕರು** : ಶ್ರೀ. ಗಣೇಶ ರಾಜಾರಾಮ ಕಾಮತ್

**ದೇಣಿಗೆ ಮೌಲ್ಯ** : ₹ 20/-

**10 digit ISBN :** 81-903850-5-4 ॐ ಗ್ರಂಥ ಕ್ರ. : 137
**EAN-13 ISBN :** 978-81-903850-5-3

**© Vishwadharma Sanstha** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

|| ಶ್ರೀ ಸರಸ್ವತಿದೇವ್ಯೈ ನಮಃ ||

**ವಿದ್ಯಾದಾಯಿನಿ ಶ್ರೀ ಸರಸ್ವತಿದೇವಿಯು ನಮಗೆ ವಿವಿಧ ದೇವತೆಗಳ ತತ್ತ್ವಗಳನ್ನು ಆಕರ್ಷಿಸುವ ರಂಗೋಲಿಗಳನ್ನು ಬಿಡಿಸುವ ಜ್ಞಾನವನ್ನು ನೀಡಿ ಈ ಗ್ರಂಥವನ್ನು ಸಾಕಾರಗೊಳಿಸಬೇಕು ಎಂದು ಅವಳ ಮಂಗಲ ಚರಣಗಳಲ್ಲಿ ಪ್ರಾರ್ಥನೆ !**

## ಕಿರುಗ್ರಂಥದ ಮನೋಗತ

### ೧. ಉದ್ದೇಶ

‘ರಂಗೋಲಿಗಳ’ ಅನೇಕ ಪುಸ್ತಕಗಳು ಉಪಲಬ್ಧವಿವೆ, ಆದರೆ ಜನರಿಗೆ ಸಾತ್ತ್ವಿಕ ರಂಗೋಲಿಗಳೆಂದರೆ ಏನು ಎಂಬುದು ತಿಳಿದಿಲ್ಲ; ಅದು ಎಲ್ಲರಿಗೂ ತಿಳಿಯಬೇಕು ಎಂಬುದೇ ಈ ಕಿರುಗ್ರಂಥವನ್ನು ಮುದ್ರಿಸುವ ಉದ್ದೇಶವಾಗಿದೆ.

### ೨. ಮಹತ್ವ

ಹಿಂದೂ ಧರ್ಮದಲ್ಲಿನ ಎಲ್ಲ ಹಬ್ಬಗಳು ಹಾಗೂ ವಿಧಿಗಳು ಯಾವುದಾದರೊಂದು ದೇವತೆಗೆ ಸಂಬಂಧಿಸಿರುತ್ತವೆ. ಆಯಾ ಹಬ್ಬದಂದು ಅಥವಾ ವಿಧಿಯ ಸಮಯದಲ್ಲಿ ಆಯಾ ದೇವತೆಯ ತತ್ತ್ವವು ವಾತಾವರಣದಲ್ಲಿ ನಿತ್ಯಕ್ಕಿಂತ ಹೆಚ್ಚು ಪ್ರಮಾಣದಲ್ಲಿರುತ್ತದೆ ಅಥವಾ ಆ ವಿಧಿಯಿಂದ ಅಲ್ಲಿ ಆಕರ್ಷಿಸಲ್ಪಡುತ್ತದೆ. ಆ ತತ್ತ್ವವು ಇನ್ನೂ ಹೆಚ್ಚು ಪ್ರಮಾಣದಲ್ಲಿ ಆಕರ್ಷಿಸಬೇಕು ಮತ್ತು ಅದರಿಂದ ಎಲ್ಲರಿಗೂ ಲಾಭವಾಗಬೇಕೆಂದು ಆ ತತ್ತ್ವವನ್ನು ಆಕರ್ಷಿಸುವ ಮತ್ತು

ಪ್ರಕ್ಷೇಪಿಸುವ ರಂಗೋಲಿಗಳನ್ನು ಈ ಕಿರುಗ್ರಂಥದಲ್ಲಿ ನೀಡಲಾಗಿದೆ. ಈ ರಂಗೋಲಿಗಳು ದೇವತೆಯ ತತ್ತ್ವವನ್ನು ಹೆಚ್ಚಿನ ಪ್ರಮಾಣದಲ್ಲಿ ಆಕರ್ಷಿಸಿ ಪ್ರಕ್ಷೇಪಿಸುವುದರಿಂದ ಅಲ್ಲಿನ ವಾತಾವರಣವು ಆ ತತ್ತ್ವದಿಂದ ತುಂಬಿಕೊಂಡು ಎಲ್ಲರಿಗೂ ಲಾಭವಾಗುತ್ತದೆ. ಸಕಾಮ ಉದ್ದೇಶಗಳಿಗಾಗಿಯೂ ರಂಗೋಲಿಗಳನ್ನು ಹಾಕಬಹುದು; ಆದರೆ ಈ ಕಿರುಗ್ರಂಥದಲ್ಲಿ ಸಾಧನೆಗೆ ಪೂರಕವಾದಂತಹ ದೇವತೆಗಳ ತತ್ತ್ವಗಳನ್ನು ಆಕರ್ಷಿಸುವ ರಂಗೋಲಿಗಳನ್ನು ಮಾತ್ರ ನೀಡಲಾಗಿದೆ.

## ೩. ವೈಶಿಷ್ಟ್ಯಗಳು

ಅ. ಶಬ್ದ, ಸ್ಪರ್ಶ, ರೂಪ, ರಸ, ಗಂಧ ಮತ್ತು ಅವುಗಳ ಶಕ್ತಿಯು ಒಂದೆಡೆ ಇರುತ್ತವೆ ಎಂಬ ಅಧ್ಯಾತ್ಮದಲ್ಲಿನ ತತ್ತ್ವಕ್ಕನುಸಾರ ರಂಗೋಲಿಯ ರೂಪ ಮತ್ತು ಬಣ್ಣಗಳಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಿದರೂ ರಂಗೋಲಿಯ ಸ್ಪಂದನಗಳು ಹೇಗೆ ಬದಲಾಗುತ್ತವೆ ಎಂಬುದನ್ನು ಬಣ್ಣದ ಪುಟಗಳಲ್ಲಿ ನೀಡಿದ ಶ್ರೀ ಗಣಪತಿ, ಶ್ರೀರಾಮ, ದತ್ತ ಮತ್ತು ಶ್ರೀ ದುರ್ಗಾದೇವಿಯ ತತ್ತ್ವಗಳಿರುವ ರಂಗೋಲಿಗಳಿಂದ ಗಮನಕ್ಕೆ ಬರುತ್ತದೆ.

ಆ. ಪ್ರತಿಯೊಂದು ದೇವತೆಯಿಂದ ಶಕ್ತಿ, ಭಾವ, ಚೈತನ್ಯ, ಆನಂದ ಮತ್ತು ಶಾಂತಿ ಈ ಐದೂ ಅನುಭೂತಿಗಳು ಬರಬಹುದು. ಈ ಕಿರು ಗ್ರಂಥದಲ್ಲಿ ನೀಡಿದ ರಂಗೋಲಿಗಳಲ್ಲಿ ಯಾವ ತತ್ತ್ವವಿದೆ ಎಂಬುದನ್ನೂ ಕೊಡಲಾಗಿದೆ.

ಇ. ರಂಗೋಲಿಗಳಲ್ಲಿ ದೇವತೆಗಳ ತತ್ತ್ವವನ್ನು ಹೆಚ್ಚೆಂದರೆ ಶೇ. ೧೦ ರಷ್ಟು ತರಬಹುದು. ಈ ಕಿರುಗ್ರಂಥದಲ್ಲಿರುವ ರಂಗೋಲಿಗಳಲ್ಲಿ ಹೆಚ್ಚೆಚ್ಚು ತತ್ತ್ವ ಆಕರ್ಷಿತವಾಗಲು ಸನಾತನದ ಸಾಧಕರು ಅವುಗಳನ್ನು ಭಾವಪೂರ್ಣವಾಗಿ ಬಿಡಿಸಲು ಪ್ರಯತ್ನಿಸಿದ್ದಾರೆ. ಸಾಧಕರ ಭಾವ ಮತ್ತು ಮಟ್ಟವು ಹೆಚ್ಚಾಗುತ್ತಾ ಹೋದಂತೆ ರಂಗೋಲಿಯಲ್ಲಿ ದೇವತಾತತ್ತ್ವದ ಪ್ರಮಾಣವೂ ಶೇ. ೧೦ ಕ್ಕೆ ಹೆಚ್ಚೆಚ್ಚು ಹತ್ತಿರವಾಗುತ್ತಾ ಹೋಗುತ್ತದೆ.

## ೪. ರಂಗೋಲಿಯ ಆಯ್ಕೆ

೪ ಅ. ಹಬ್ಬ, ವ್ರತ ಮತ್ತು ಉತ್ಸವಗಳಿಗನುಸಾರ : ಈ ಕಿರುಗ್ರಂಥದಲ್ಲಿ ಹಬ್ಬ, ವ್ರತ ಮತ್ತು ಉತ್ಸವಗಳು ಯಾವ ತಿಥಿಯಂದು ಬರುತ್ತವೆ ಎಂಬುದರ ಕೋಷ್ಟಕವನ್ನು ನೀಡಲಾಗಿದೆ. ಕೋಷ್ಟಕದಲ್ಲಿ ದೇವತೆಯ ತತ್ತ್ವವನ್ನು ಆಕರ್ಷಿಸುವ ರಂಗೋಲಿಯು ಯಾವ ಪುಟದಲ್ಲಿದೆ ಎಂಬುದನ್ನೂ ಕೊಡಲಾಗಿದೆ.

## ೫. ವಿವಿಧ ಶುಭಸಂದರ್ಭಗಳಲ್ಲಿ ಉಪಯುಕ್ತ

ಹುಟ್ಟುಹಬ್ಬ, ಆರತಿ ಬೆಳಗುವುದು ಮುಂತಾದ ಶುಭಸಂದರ್ಭಗಳಲ್ಲಿ ಅಂಗಳದಲ್ಲಿ ಹಾಗೂ ತಟ್ಟೆಯ ಸುತ್ತಲೂ ಆನಂದದಾಯಕ ರಂಗೋಲಿಗಳು ಹೇಗಿರಬೇಕು ಎಂಬುದನ್ನೂ ಈ ಕಿರುಗ್ರಂಥದಲ್ಲಿ ನೀಡಲಾಗಿದೆ.

## ೬. ವ್ಯಾವಹಾರಿಕ ಸೂಚನೆಗಳು

ಕಿರುಗ್ರಂಥದ ಬಣ್ಣದ ಪುಟಗಳಲ್ಲಿ ನೀಡಲಾಗಿರುವ ರಂಗೋಲಿಗಳಲ್ಲಿ ಉಪಯೋಗಿಸಲಾಗಿರುವ ಬಣ್ಣಗಳನ್ನೇ ರಂಗೋಲಿಗಳನ್ನು ಹಾಕುವಾಗ ಉಪಯೋಗಿಸಬೇಕು. ಈ ಬಣ್ಣಗಳು ಸಾತ್ತ್ವಿಕವಾಗಿವೆ. ಇವುಗಳಿಂದ ರಂಗೋಲಿಯ ಸಾತ್ತ್ವಿಕತೆಯು ಹೆಚ್ಚಾಗಲು ಸಹಾಯವಾಗುತ್ತದೆ. ರಂಗೋಲಿಯ ಸಾತ್ತ್ವಿಕತೆಯು ಹೆಚ್ಚಾದರೆ, ದೇವತೆಯ ತತ್ತ್ವವನ್ನು ಆಕರ್ಷಿಸಲು ಸಹಾಯವಾಗುತ್ತದೆ.

## ೭. ಪ್ರಾರ್ಥನೆ

‘ಈ ಕಿರುಗ್ರಂಥದಿಂದ ಕೇವಲ ರಂಗೋಲಿಗಳು ಮಾತ್ರವಲ್ಲ, ಎಲ್ಲ ವಿಷಯಗಳು ಸಾತ್ತ್ವಿಕವಾಗಲು ಎಲ್ಲರಿಂದಲೂ ಪ್ರಯತ್ನಗಳು ಪ್ರಾರಂಭವಾಗಲಿ’ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ !

**– ಸಂಕಲನಕಾರರು**


**ಕಲೆಗೆ ಸಂಬಂಧಿಸಿದ ಸನಾತನದ ಗ್ರಂಥಗಳು !**

- **ಸಾತ್ತ್ವಿಕ ಮದರಂಗಿಗಳು** (ಅಯೋಗ್ಯ ಮದರಂಗಿಗಳ ದುಷ್ಪರಿಣಾಮಗಳ ಸಹಿತ)
- **ಮದರಂಗಿಯ ಸಾತ್ತ್ವಿಕ ವಿನ್ಯಾಸಗಳ ವಿಧಗಳು** (ಸಾತ್ತ್ವಿಕತೆಯ ಕಾರಣಗಳೊಂದಿಗೆ)

